

بسم اللهِ الرّحمٰنِ الرّحيم

# ಜುಮುಅತುಲ್ ವಿದಾ ಎಂಬುವುದಿಲ್ಲ, ಆದರೆ ಪ್ರತಿಯೊಂದು ಜುಮುಅ ಮಹತ್ವಪೂರ್ಣವಾಗಿದೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನ್‌ನ **'ಬೈತುಲ್ ಫುತೂಹ್'** ಮಸೀದಿಯಲ್ಲಿ**17-07-2015** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಈ ಕೆಳಗಿನ ಪವಿತ್ರ ಖುರ್‌ಆನ್ ವಚನ ತಿಲಾವತ್ ಮಾಡಿದರು:*

يَاأَيُّهَا الَّذِينَ آمَنُوا إِذَا نُودِي لِلصَّلَاةِ مِنْ يَوْمِ الْجُمُعَةِ فَاسْعَوْا إِلَى ذِكْرِ اللَّهِ وَذَرُوا الْبَيْعَ ذَلِكُمْ خَيْرٌ لَكُمْ إِنْ كُنتُمْ تَعْلَمُونَ

فَإِذَا قُضِيَتْ الصَّلَاةُ فَانتَشِرُوا فِي الْأَرْضِ وَابْتَغُوا مِنْ فَضْلِ اللَّهِ وَاذْكُرُوا اللَّهَ كَثِيرًا لَعَلَّكُمْ تُفْلِحُونَ

**ಯಾ ಅಯ್ಯುಹಲ್ಲಝೀನ ಆಮನೂ ಇಝಾ ನೂದಿಯಲಿಸ್ಸಲಾತಿ ಮಿನ್ ಯೌಮಿಲ್ ಜುಮುಅತಿ ಫಸ್‌ಅವ್ ಇಲಾ ಝಿಕ್ರಿಲ್ಲಾಹಿ ವಝರುಲ್ ಬೈಅ್, ಝಾಲಿಕುಮ್ ಖೈರುಲ್ಲಕುಮ್ ಇನ್ ಕುನ್‌ತುಮ್ ತಅ್‌ಲಮೂನ್. ಫ ಇಝಾ ಖುಝಿಯತಿಸ್ಸಲಾತು ಫನ್‌ತಶಿರೂ ಫಿಲ್‌ಅರ್‌ಝಿ ವಬ್ತಗೂ ಮಿನ್ ಫಝ್‌ಲಿಲ್ಲಾಹಿ ವಝ್‌ಕುರುಲ್ಲಾಹ ಕಸೀರನ್ ಲಅಲ್ಲಕುಮ್ ತುಫ್‌ಲಿಹೂನ್.**

"ಎಲೈ ಸತ್ಯವಿಶ್ವಾಸಿಗಳೇ, ಶುಕ್ರವಾರ ದಿನದಂದು ನಿಮ್ಮನ್ನು ಪ್ರಾರ್ಥನೆಗೆ ಕರೆಯಲಾದರೆ, ಅಲ್ಲಾಹನನ್ನು ಸ್ಮರಿಸಲಿಕ್ಕೋಸ್ಕರ ನೀವು ತ್ವರಿತವಾಗಿ ಹೋಗಿರಿ; ನಿಮ್ಮ ವ್ಯಾಪಾರ ವ್ಯವಹಾರವನ್ನೆಲ್ಲ ನಿಲ್ಲಿಸಿರಿ. ನೀವು ಮನವರಿಕೆ ಮಾಡಿದರೆ ಅದೇ ನಿಮಗೆ ಉತ್ತಮವಾದುದು. ಪ್ರಾರ್ಥನೆ ಮುಗಿದ ಬಳಿಕ ನೀವು ಭೂಮಿಯಲ್ಲಿ ಚದುರಿ ಹೋಗಿ ಅಲ್ಲಾಹನ ಅನುಗ್ರಹ ಅರಸಿರಿ. ನೀವು ಯಶಸ್ಸುಗಳಿಸಲಿಕ್ಕೋಸ್ಕರ ಅಲ್ಲಾಹನ ಸ್ಮರಣೆಯನ್ನು ಹೆಚ್ಚಾಗಿ ಮಾಡಿರಿ." (ಪವಿತ್ರ ಖುರ್‌ಆನ್ 62: 10,11)

ರಮಝಾನ್ ತಿಂಗಳು ಕೊನೆಗೊಳ್ಳಲಿದೆ. ಕೆಲವು ಸ್ಥಳಗಳಲ್ಲಿ ಇಂದು ಕೊನೆಯ ಉಪವಾಸವಾಗಿದೆ. ಬೇರೆ ಕೆಲವು ಸ್ಥಳಗಳಲ್ಲಿ ನಾಳೆ ಕೊನೆಯ ಉಪವಾಸವಾಗುವುದು. ಅಲ್ಲಾಹನು ಹೇಳಿದ ಹಾಗೆ ಎಣಿಕೆಯ ಕೆಲವು ದಿನಗಳು ಮುಗಿತಾಯವಾದುವು. ನಮ್ಮ ಪೈಕಿ ಬಹಳ ಜನರು ಈ ದಿನಗಳ ಅನುಗ್ರಹಗಳನ್ನು ಗಳಿಸಿರಬಹುದು. ಕೆಲವರಿಗೆ ಈ ತಿಂಗಳಲ್ಲಿ ಹೊಸ ಅನುಭವಗಳುಂಟಾಗಿರಬಹುದು. ಈ ಅನುಗ್ರಹಗಳನ್ನು ನಮ್ಮ ಜೀವಿತದ ಭಾಗಗಳನ್ನಾಗಿ ಮಾಡಲು, ಈ ಆಧ್ಯಾತ್ಮಿಕ ಅನುಭವಗಳನ್ನು ನಮ್ಮ ಜೀವಿತದ ಭಾಗಗಳನ್ನಾಗಿ ಮಾಡಿ ಅಲ್ಲಾಹನ ಕಡೆಗೆ ಚಲಿಸುತ್ತಿರುವ ನಮ್ಮ ಹೆಜ್ಜೆಗಳು ಇಲ್ಲಿ ನಿಂತು ಹೋಗದಂತೆ ನೋಡಿಕೊಳ್ಳಬೇಕಾದುದು ಹಾಗೂ ಅದಕ್ಕಾಗಿ ದುಆ ಮಾಡಬೇಕಾದುದು ನಮ್ಮ ಕರ್ತವ್ಯವಾಗಿದೆ. ನಮ್ಮ ಪಾದಗಳು ಯಾವಾಗಲೂ ಮುಂದೆ ಸಾಗುವವುಗಳಾಗಲಿ. ಪ್ರತಿಯೊಂದು ಹೆಜ್ಜೆ ಅಸಂಖ್ಯಾತ ಅನುಗ್ರಹಗಳನ್ನು ಬಾಚಿಕೊಳ್ಳುವ ಹೆಜ್ಜೆಯಾಗಲಿ. ಇಂದು ರಮಝಾನಿನ ಅಂತಿಮ ಜುಮುಅ ಸಹ ಆಗಿದೆ. ನಮ್ಮ ಪೈಕಿ ಬಹುತೇಕ ಜನರು ಪ್ರತಿಯೊಂದು ಜುಮುಅ ನಮಾಝಿಗೆ ಸೇರಲು ಬಹಳ ಪ್ರಾಮುಖ್ಯತೆ ನೀಡುವವರಾಗಿದ್ದಾರೆ. ಆದರೆ ಬಹಳ ಜನರು ರಮಝಾನಿನ ಕೊನೆಯ ಜುಮುಅ ನಮಾಝ್ ಬಗ್ಗೆ ಬಹಳ ಪ್ರಾಮುಖ್ಯತೆ ನೀಡುವವರು ಸಹ ಇರಬಹುದು. ಅಲ್ಲಾಹನ ಅನುಗ್ರಹದಿಂದ ಈಗ ಲೋಕದಲ್ಲಿ ನಮ್ಮ ಜಮಾಅತ್ ಬಹಳ ವಿಶಾಲವಾಗಿ ಹರಡಿದೆ. ವಿವಿಧ ವರ್ಗಗಳ ಜನರು ನಮ್ಮ ಜಮಾಅತಿಗೆ ಸೇರುತ್ತಿದ್ದಾರೆ. ಕೆಲವರ ಮೇಲೆ ಹಿಂದಿನ ಕಾಲದ ತರಬೇತಿಯ ಪ್ರಭಾವ ಸಹ ಈಗಲೂ ಇದೆ. ಕೆಲವರು ವರ್ಷವಿಡೀ ಜುಮುಅಗಳಿಗೆ ನೀಡದ ಮಹತ್ವ ಈ ರಮಝಾನಿನ ಕೊನೆಯ ಜುಮುಅಕ್ಕೆ ನೀಡುತ್ತಾರೆ. ಮುಸ್ಲಿಮರ ಸಾಮಾನ್ಯ ಕಲ್ಪನೆ ಪ್ರಕಾರ ರಮಝಾನಿನ ಕೊನೆಯ ಜುಮುಅ **ಜುಮುಅತುಲ್ ವಿದಾ** ಎಂಬ ಹೆಸರಿನಲ್ಲಿ ಪ್ರಸಿದ್ಧವಾಗಿದೆ. ಈ ಜುಮುಅದಲ್ಲಿ ನಮಾಝ್ ಮಾಡಿದರೆ ಅವರು ಕಳೆದ ಒಂದು ವರ್ಷದಲ್ಲಿ ಮಾಡಿದ ಕೆಟ್ಟ ಕೆಲಸಗಳಿಗೆ ಶಿಕ್ಷೆಯಿಂದ ವಿನಾಯತಿ ದೊರಕುವುದೆಂದು ಸಾಮಾನ್ಯ ಮುಸ್ಲಿಮರು ನಂಬುತ್ತಾರೆ. ಇಡೀ ವರ್ಷ ಮಾಡಬೇಕಾಗಿದ್ದ ಆರಾಧನೆಗಳು ಈ ರಮಝಾನಿನ ಕೊನೆಯ ಜುಮುಅದಲ್ಲಿ ಮಾಡುವ ಒಂದು ನಮಾಝ್‌ನಿಂದ ಈಡೇರಿದಂತಾಗುವುದು ಎಂದು ಅವರು ನಂಬುತ್ತಾರೆ. ನಮ್ಮಲ್ಲಿ ಅಂತಹ ನಂಬಿಕೆ ಹೊಂದಿದ ಜನರು ಬಹಳ ಕಡಿಮೆ ಸಂಖ್ಯೆಯಲ್ಲಿದ್ದರೂ ನಾನು ಅವರೊಂದಿಗೆ ಹೇಳಲು ಇಚ್ಛಿಸುತ್ತೇನೆ- ಈ ಜುಮುಅದಲ್ಲಿ ಸೇರುವ ಮೂಲಕ ಮಾತ್ರ ನಮ್ಮ ಜೀವಿತದ ಉದ್ದೇಶಲಕ್ಷ್ಯ ಈಡೇರಲಾರದು. ರಮಝಾನಿನ ಕೊನೆಯ ಜುಮುಅ ಮಾತ್ರ ಅನುಷ್ಠಿಸುವುದರಿಂದ ಮೋಕ್ಷ ಲಭಿಸುವುದು ಎಂದು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳಿಂದ ಸಾಬೀತಾಗುವುದಿಲ್ಲ. ಈ ಜುಮುಅದಲ್ಲಿ ಮಾತ್ರ ಸೇರುವುದರಿಂದ ಮನುಷ್ಯನಿಗೆ ಇಹ ಪರಲೋಕದಲ್ಲಿ ಒಳಿತುಂಟಾಗುವುದೆಂಬ ವಿಷಯ ಎಲ್ಲಿಂದಲೂ ಸಾಬೀತಾಗುವುದಿಲ್ಲ. ಆದುದರಿಂದ ನಮ್ಮ ಯುವ ಜನರು ಮತ್ತು ಜುಮುಅದಲ್ಲಿ ಬಂದು ಸೇರಲು ಉದಾಸೀನರಾಗುವವರು ನೆನಪಿಡಬೇಕಾದುದೇನೆಂದರೆ ಅಹ್ಮದಿಯೇತರರು ಜುಮುಅತುಲ್ ವಿದಾ ಬಗ್ಗೆ ಎಂತಹ ಕಲ್ಪನೆಗಳನ್ನು ಹೊಂದಿದ್ದರೂ, ಅಹ್ಮದಿಯಾ ಜಮಾಅತಿನಲ್ಲಿ ಅಲ್ಲಾಹನ ಮತ್ತು ಅವನ ಸಂದೇಶವಾಹಕರ ಉಪದೇಶ ಪ್ರಕಾರ ಜುಮುಅತುಲ್ ವಿದಾ ಎಂಬ ಕಲ್ಪನೆ ಇರುವುದಿಲ್ಲ. ಅಂತಹ ಕಲ್ಪನೆ ಇರಲೂಬಾರದು. ಆದರೆ ಈ ದಿನದ ಜುಮುಅದಲ್ಲಿ ಆಸಕ್ತಿಯಿಂದ ಭಾಗವಹಿಸುವವನು ಈ ರೀತಿ ಯೋಚಿಸುವುದಾದರೆ- 'ನಾನು ಈ ದಿನ ಪ್ರತಿಜ್ಞೆ ಮಾಡುತ್ತೇನೆ. ನಾನು ನನ್ನ ಬಲಹೀನತೆಗಳನ್ನು

ದೂರಸರಿಸುವೆನು. ಜುಮುಅಗಳಲ್ಲಿ ಸೇರದ ಕಾರಣದಿಂದ ನನ್ನಲ್ಲಿ ಉಂಟಾದ ಬಲಹೀನತೆಗಳನ್ನು ಹೋಗಲಾಡಿಸಿ ಮುಂದೆ ಪ್ರತಿಯೊಂದು ಜುಮುಅಗಳಲ್ಲಿ ಸೇರಲು ವಿಶೇಷವಾಗಿ ಪ್ರಯತ್ನಿಸುವೆನು' ಎಂದು ನಿರ್ಧರಿಸುವುದಾದರೆ ಅಂತಹ ವ್ಯಕ್ತಿಗೆ ಈ ದಿನದ ಜುಮುಅ ಖಂಡಿತವಾಗಿಯೂ ಮಹತ್ವಪೂರ್ಣದ್ದಾಗುವುದು. ಈ ದಿನ ಅವನಿಗೆ ಜುಮುಅದ ಕಾರಣದಿಂದ ಮಾತ್ರವಲ್ಲ ಅವನು ತನ್ನಲ್ಲಿ ಪರಿಶುದ್ಧ ಬದಲಾವಣೆ ಉಂಟುಮಾಡಿದ ಕ್ಷಣವನ್ನು ಈ ದಿನ ಹೊಂದಿರುವುದರಿಂದ ಅವನಿಗೆ ಈ ದಿನ ಅನುಗ್ರಹದಾಯಕವಾಗುವುದು. ಅಲ್ಲಾಹನ ಆಜ್ಞೆಗಳನ್ನು ಇನ್ನು ಮುಂದೆ ಅವುಗಳಿಗೆ ಮಹತ್ವ ನೀಡಿ ಅನುಷ್ಠಿಸುವೆನು ಎಂಬ ನಿರ್ಧಾರ ಮಾಡಿದ ಆ ಘಳಿಗೆ ಅವನಿಗೆ ಅದು ಲೈಲತುಲ್ ಖದ್‌ರ್ ಆಗುವುದು. ಒಂದು ಅಂಧಕಾರಮಯ ರಾತ್ರಿಯ ನಂತರ ಅವನಲ್ಲಿ ಆಧ್ಯಾತ್ಮಿಕ ಪ್ರಕಾಶ ಬೆಳಗುವಂತಾಯಿತು. ನಾನು ಕಳೆದ ವಾರದ ಖುತ್‌ಬದಲ್ಲಿ ಹೇಳಿದ ಹಾಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳಿರುವರು: ಮನುಷ್ಯನು ತನ್ನಲ್ಲಿ ಪರಿಶುದ್ಧ ಬದಲಾವಣೆ ಉಂಟುಮಾಡಿ ಅಲ್ಲಾಹನ ಕಡೆಗೆ ಬಾಗುವ ಮತ್ತು ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತೇನೆಂದು ಪ್ರತಿಜ್ಞೆ ಮಾಡುವ ಮತ್ತು ಅದರಲ್ಲಿ ಸ್ಥಿರತೆ ಕಾಪಾಡುವ ಕಾಲ ಅವನಿಗೆ ಅತ್ಯಂತ ಪವಿತ್ರವಾದ ಲೈಲತುಲ್ ಖದ್‌ರ್ ಕಾಲವಾಗಿದೆ.

ನಾನು ತಿಲಾವತ್ ಮಾಡಿದ ಪವಿತ್ರ ಖುರ್‌ಆನ್ ವಚನಗಳಲ್ಲಿ ಅಲ್ಲಾಹನು ಹೀಗೆ ಹೇಳಿರುವನು: ಶುಕ್ರವಾರದ ದಿನದಂದು ನಿಮ್ಮನ್ನು ಪ್ರಾರ್ಥನೆಗೆ ಕರೆದರೆ ಅಲ್ಲಾಹನನ್ನು ಸ್ಮರಿಸಲಿಕ್ಕೋಸ್ಕರ ನೀವು ತ್ವರಿತವಾಗಿ ಹೋಗಿರಿ. ನಿಮ್ಮ ವ್ಯಾಪಾರ ವ್ಯವಹಾರವನ್ನೆಲ್ಲಾ ನಿಲ್ಲಿಸಿರಿ. ನೀವು ಮನವರಿಕೆ ಮಾಡಿದರೆ ಅದೇ ನಿಮಗೆ ಉತ್ತಮವಾದುದು.

ಮುಂದಿನ ವಚನದಲ್ಲಿ ಹೀಗೆ ಹೇಳಲಾಗಿದೆ. ಪ್ರಾರ್ಥನೆ ಮುಗಿದ ಬಳಿಕ ನೀವು ಭೂಮಿಯಲ್ಲಿ ಚದುರಿ ಹೋಗಿ ಅಲ್ಲಾಹನ ಅನುಗ್ರಹವನ್ನು ಅರಸಿರಿ. ನೀವು ಯಶಸ್ಸುಗಳಿಸಲಿಕ್ಕೋಸ್ಕರ ಅಲ್ಲಾಹನ ಸ್ಮರಣೆಯನ್ನು ಹೆಚ್ಚಾಗಿ ಮಾಡಿರಿ.

ಈ ವಚನಗಳಲ್ಲಿ ಅಲ್ಲಾಹನು ಸ್ಪಷ್ಟವಾಗಿ ಹೇಳಿರುವುದೇನೆಂದರೆ ನೀವು ಎಲ್ಲಾ ಕೆಲಸಗಳನ್ನು ಬಿಟ್ಟು ಹೃದಯದಲ್ಲಿ ತಖ್ವ (ಭಯಭಕ್ತಿ) ಹೊಂದಿ ಜುಮುಅಕ್ಕೆ ಸೇರಬೇಕು ಎಂದು. ಈ ವಚನಗಳಲ್ಲಿ ಅಲ್ಲಾಹನು ರಮಝಾನಿನ ಜುಮುಅಗಳ ಬಗ್ಗೆಯಾಗಲಿ ರಮಝಾನಿನ ಕೊನೆಯ ಜುಮುಅದಲ್ಲಿ ಸೇರುವ ಬಗ್ಗೆಯಾಗಲಿ ಹೇಳಿಲ್ಲ. ಯಾವುದೇ ಪ್ರತ್ಯೇಕ ಜುಮುಅದ ಬಗ್ಗೆ ಹೇಳದೆ ಎಲ್ಲ ಜುಮುಅಗಳ ಮಹತ್ವದ ಬಗ್ಗೆ ಅಲ್ಲಾಹನು ಸೂಚಿಸಿದ್ದಾನೆ. ಜುಮುಅಕ್ಕೆ ಬರಲು ತಡಮಾಡುವವರು ಇದರ ಬಗ್ಗೆ ಯೋಚಿಸಬೇಕಾಗಿದೆ. ಅವರು ತಮ್ಮ ವ್ಯವಹಾರಗಳನ್ನು ಸ್ವಲ್ಪ ಬೇಗನೇ ಮುಗಿಸಿ ಜುಮುಅದಲ್ಲಿ ಭಾಗವಹಿಸಬೇಕಾಗಿದೆ.

ರಮಝಾನಿನ ಕೊನೆಯ ಜುಮುಅ ಬಹಳ ಮಹತ್ವ ಪೂರ್ಣವಾಗಿದೆ ಎಂದು ಪವಿತ್ರ ಖುರ್‌ಆನ್‌ನಲ್ಲಾಗಲಿ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಉಪದೇಶಗಳಲ್ಲಾಗಲಿ ಉಲ್ಲೇಖಿತವಾಗಿಲ್ಲ. ಎಲ್ಲ ಜುಮುಅಗಳು ಮಹತ್ವಪೂರ್ಣವಾಗಿವೆ ಎಂದು ಹೇಳಲಾಗಿದೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೀಗೆ ಹೇಳಿದ್ದಾರೆ: ಓ ಮುಸ್ಲಿಮರೇ, ನಿಮಗೆ ಶುಕ್ರವಾರ ದಿನವನ್ನು ಈದ್ ದಿನವನ್ನಾಗಿ ಮಾಡಲಾಗಿದೆ. ಆ ದಿನ ನೀವು ಸ್ನಾನ ಮಾಡಿ ನಮಾಝ್‌ಗೆ ಹೋಗಲು ಸಿದ್ಧರಾಗಿರಿ. ಪ್ರತಿ ಶುಕ್ರವಾರ ದಿನ ಎಲ್ಲ ಕಾರ್ಯ ವ್ಯವಹಾರಗಳನ್ನು ಸ್ಥಗಿತಗೊಳಿಸಿ ಮಸ್‌ಜಿದ್ ಕಡೆಗೆ ನಮಾಝ್‌ಗೋಸ್ಕರ ಹೋಗಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಸ್ಪಷ್ಟವಾಗಿ ಹೇಳಿದ ಪ್ರಕಾರ ಸತ್ಯವಿಶ್ವಾಸಿ ತನ್ನ ವಿಶ್ವಾಸದ ಮಟ್ಟವನ್ನು ವರ್ಧಿಸಲು ಪ್ರತಿಯೊಂದು ಜುಮುಅಕ್ಕೆ ಕಡ್ಡಾಯವಾಗಿ ಹಾಜರಾಗಬೇಕು. ಜುಮುಅಕ್ಕೆ ಹೋಗದಿದ್ದರೆ ಉಂಟಾಗುವ ಹಾನಿಯ ಬಗ್ಗೆ ಸಹ ಹೇಳಲಾಗಿದೆ. ಜುಮುಅ ನಮಾಝ್‌ಗೆ ಉದ್ದೇಶಪೂರ್ವಕವಾಗಿ ಹೋಗದವನ ಹೃದಯ ಒಳಿತುಗಳನ್ನು ಮಾಡುವುದಕ್ಕೆ ಸಂಬಂಧಿಸಿ ನಿಷ್ಕ್ರಿಯವಾಗುತ್ತದೆ. ಇದು ಬಹಳ ಭಯಪಡಬೇಕಾದ ವಿಷಯವಾಗಿದೆ. ಉದಾಸೀನರಾಗುವವರು ಆತ್ಮ ಪರಿಶೋಧನೆ ನಡೆಸಬೇಕು. ಕಾರಣಗಳಿಲ್ಲದ ಉದಾಸೀನತೆಗಳನ್ನು ತ್ಯಜಿಸುವುದು ಆವಶ್ಯಕವಾಗಿದೆ.

ಯಾವುದಾದರೂ ಧರ್ಮಬದ್ಧ ಕಾರಣವಿದ್ದರೆ ಸರಿ. ಆದರೆ ನಿಷ್ಕಾರಣವಾಗಿ ಜುಮುಅಕ್ಕೆ ಹೋಗದವನು ಹಿಡಿಗೂಡಲ್ಪಡುತ್ತಾನೆ. ಸರಿಯಾದ ಕಾರಣವಿಲ್ಲದೆ ಜುಮುಅವನ್ನು ಬಿಡುವುದು ನಿಷಿದ್ಧವಾಗಿದೆ. ಯಾರಿಗೆಲ್ಲ ಜುಮುಅಕ್ಕೆ ಹೋಗುವುದು ಕಡ್ಡಾಯವಾಗಿಲ್ಲ ಎಂದು ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಹೇಳಿದ್ದಾರೆ: ಗುಲಾಮ, ಮಹಿಳೆ, ಮಗು ಮತ್ತು ರೋಗಿ ಈ ನಾಲ್ವರಿಗೆ ಜುಮುಅ ಕಡ್ಡಾಯವಾಗಿಲ್ಲ. ಅವರಿಗೆ ಮಾತ್ರ ವಿನಾಯತಿ ಇದೆ. ಮಹಿಳೆ, ಮಗು, ರೋಗಿ ಮತ್ತು ತನ್ನ ಯಜಮಾನನ ನಿರ್ಬಂಧಗಳಿಗೆ ಪಾತ್ರನಾಗುವ ಗುಲಾಮ ಇವರು ಜುಮುಅಕ್ಕೆ ಆಗಮಿಸದಿದ್ದರೂ ಅವರ ಹೃದಯ ಕಪ್ಪಾಗಲಾರದು ಎಂದು ಸೂಚಿಸಲಾಗಿದೆ. ಇಸ್ಲಾಮ್ ಧರ್ಮದ ಸುಂದರ ಉಪದೇಶಗಳು ಈ ನಾಲ್ಕು ವಿಭಾಗದವರಿಗೆ ವಿನಾಯತಿ ನೀಡಿದೆ.

ನಾವು ಪ್ರತಿಯೊಂದು ಜುಮುಅಕ್ಕೆ ಮಹತ್ವ ನೀಡಬೇಕೆಂಬುದನ್ನು ನೆನಪಿನಲ್ಲಿಡಿರಿ. ನೀವು ಕಠಿಣ ಪರಿಸ್ಥಿತಿಯಲ್ಲಿದ್ದು ನಿಮಗೆ ಜುಮುಅ ನಷ್ಟವಾಗುವುದಾದರೆ ನೀವು ಪ್ರಾರ್ಥಿಸಿರಿ. ಅಲ್ಲಾಹನು ನಿಮಗೆ ಸುಲಭಪಡಿಸಿ ಕೊಡುವನು. ನೋವಿನೊಂದಿಗೆ ಪ್ರಾರ್ಥಿಸಿದಾಗ ಅಲ್ಲಾಹನು ಪ್ರಾರ್ಥನೆ ಅಂಗೀಕರಿಸಿ ನಿಮಗೆ ಜುಮುಅ ಅನುಷ್ಠಿಸುವ ವ್ಯವಸ್ಥೆ ಮಾಡಿಕೊಡುವನು. ಮೇಲೆ ವಿವರಿಸಿದ ನಾಲ್ಕು ವಿಭಾಗದ ಜನರ ಹೊರತು ಉಳಿದೆಲ್ಲರಿಗೂ ಜುಮುಅ ಕಡ್ಡಾಯವಾಗಿದೆ. ಪ್ರತಿಯೊಂದು ಜುಮುಅದ ದಿನ ನಮಾಝ್‌ಗೆ ಹೋಗಲು ವಿಶೇಷ ವ್ಯವಸ್ಥೆ ಮಾಡಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ

ವಸಲ್ಲಮರು ಹೀಗೆ ಹೇಳಿದ್ದಾರೆ: ಐದು ಹೊತ್ತಿನ ನಮಾಝ್, ಒಂದು ಜುಮುಅದಿಂದ ಇನ್ನೊಂದು ಜುಮುಅ ಮತ್ತು ಒಂದು ರಮಝಾನ್ ಇನ್ನೊಂದು ರಮಝಾನ್ ವರೆಗೆ, ಅದರ ಮಧ್ಯವೇಳೆಯಲ್ಲಿ ಸಂಭವಿಸುವ ಪಾಪಗಳಿಗೆ ಪರಿಹಾರವಾಗುವುದು – ಮನುಷ್ಯನು ದೊಡ್ಡ ದೊಡ್ಡ ಪಾಪಗಳಿಂದ ತನ್ನನ್ನು ರಕ್ಷಿಸಿಕೊಂಡರೆ. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಐದು ಹೊತ್ತಿನ ನಮಾಝ್‌ಗಳ ಬಗ್ಗೆ ಸಹ ಅವು ಕಡ್ಡಾಯವಾಗಿ ಅನುಷ್ಠಿಸಬೇಕೆಂದೂ ಸೂಚಿಸಿದ್ದಾರೆ. ಅವುಗಳ ಬಗ್ಗೆ ಅಲ್ಲಾಹನೇ ಆದೇಶಿಸಿದ್ದಾನೆ. ಇದೇ ರೀತಿ ಜುಮುಅದ ಬಗ್ಗೆ ಮತ್ತು ಅದರಲ್ಲಿ ಇಮಾಮರು ನೀಡುವ ಖುತ್‌ಬದಿಂದ ನಿಮ್ಮ ಹೃದಯದಲ್ಲಿ ಉಂಟಾಗುವ ಪ್ರಜ್ಞೆಯನ್ನು ಮುಂದಿನ ಜುಮುಅ ತನಕ ಕಾಪಾಡಲು ಹೇಳಿದ್ದಾರೆ. ಮತ್ತು ಅವುಗಳನ್ನು ಅನುಷ್ಠಾನಕ್ಕೆ ತರಲು ಹೇಳಿದ್ದಾರೆ. ಹೀಗೆ ಮಾಡಿದರೆ ಒಂದು ಜುಮುಅದಿಂದ ಮುಂದಿನ ಜುಮುಅಕ್ಕೆ ತಲಪುವಾಗ ನೀವು ಕೆಡುಕುಗಳಿಂದ ಮುಕ್ತರಾಗುವಿರಿ. ಮತ್ತು ನಿಮ್ಮ ಪಾಪ ಕೃತ್ಯಗಳು ಕ್ಷಮಿಸಲ್ಪಡುವುವು. ಇಲ್ಲಿ ಸಹ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಒಂದು ಜುಮುಅದಿಂದ ಇನ್ನೊಂದು ಜುಮುಅ ತನಕ ಎಂದು ಹೇಳಿ ಪ್ರತಿಯೊಂದು ಜುಮುಅ ಕಡ್ಡಾಯವಾಗಿರುವುದನ್ನು ಸೂಚಿಸಿದ್ದಾರೆ.

ಇದೇ ರೀತಿ ರಮಝಾನಿನ ಪ್ರಾಮುಖ್ಯತೆಯನ್ನು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ. ಒಳಿತನ್ನು ನಿರಂತರವಾಗಿ ಆಚರಣೆಗೆ ತರುವ ಮೂಲಕ ಪಾಪದಿಂದ ರಕ್ಷಣೆ ಸಿಗುವುದೆಂದು ಅವರು ಸೂಚಿಸಿದ್ದಾರೆ. ಆದುದರಿಂದ ನಮಾಝ್‌ಗಳನ್ನು ಕಡ್ಡಾಯವಾಗಿ ಅನುಷ್ಠಿಸುವುದು ಮತ್ತು ಜುಮುಅಗಳಿಗೆ ಕಡ್ಡಾಯವಾಗಿ ಹೋಗುವುದು ಆವಶ್ಯಕವಾಗಿದೆ. ಅದೇ ರೀತಿ ರಮಝಾನ್ ತಿಂಗಳಲ್ಲಿ ಉಪವಾಸ ಮಾಡುವುದರಿಂದ ಸಹ ಪಾಪ ಪರಿಹಾರವಾಗುತ್ತದೆ ಮತ್ತು ಒಳಿತುಗಳು ವರ್ಧಿಸುತ್ತವೆ. ಅಲ್ಲಾಹನು ವಿಧಿಸಿದ ಶರತ್ತುಗಳಿಗನುಸಾರವಾಗಿ ಉಪವಾಸ ವ್ರತ ಅನುಷ್ಠಿಸಬೇಕು. ವಾಸ್ತವಿಕವಾದ ತಖ್ವ (ಭಯಭಕ್ತಿ) ಹೊಂದಲು ಇವುಗಳನ್ನೆಲ್ಲಾ ಅನುಷ್ಠಾನಕ್ಕೆ ತರಬೇಕು. ಅಲ್ಲಾಹನ ಸಾಮೀಪ್ಯ ಗಳಿಸಲು ಇವುಗಳನ್ನೆಲ್ಲಾ ಮಾಡಬೇಕು. ಪಾಪಗಳಿಂದ ಸಂರಕ್ಷಣೆ ಪಡೆಯಲು ಅಲ್ಲಾಹನು ತೋರಿಸಿದ ಮಾರ್ಗಗಳನ್ನು ಅವಲಂಬಿಸಬೇಕು. ಅಲ್ಲಾಹನು ನಮಗೆ ಪ್ರತಿ ದಿನದ ಒಂದು ಕಾರ್ಯಕ್ರಮ ಪಟ್ಟಿ ನೀಡಿದ್ದಾನೆ. ವಾರಕ್ಕೊಮ್ಮೆ ಅನುಷ್ಠಾನ ಮಾಡಬೇಕಾದುದನ್ನೂ ಸೂಚಿಸಿದ್ದಾನೆ. ವರ್ಷಕ್ಕೊಮ್ಮೆ ಮಾಡಬೇಕಾದುದನ್ನೂ ನಿರ್ದೇಶಿಸಿದ್ದಾನೆ. ಮನುಷ್ಯನ ಆಧ್ಯಾತ್ಮಿಕ ಪರಿಷ್ಕರಣೆಗೆ ಇವುಗಳ ಅನುಷ್ಠಾನ ಆವಶ್ಯಕವಾಗಿವೆ. ಯಾರು ಆಧ್ಯಾತ್ಮಿಕ ಮಜಲುಗಳನ್ನು ದಾಟುತ್ತಾ ಮುಂದೆ ಸಾಗುತ್ತಾನೋ ಅವನು ಅಲ್ಲಾಹನ ಕ್ಷಮೆಗೆ ಪಾತ್ರನಾಗುತ್ತಾನೆ. ಜುಮುಅದ ಮಹತ್ವವೇನೆಂದು ಇವುಗಳಿಂದೆಲ್ಲಾ ಹೆಚ್ಚು ಸ್ಪಷ್ಟವಾಗುತ್ತದೆ. ವರ್ಷಕ್ಕೊಮ್ಮೆ ನಡೆಸುವ ಆಧ್ಯಾತ್ಮಿಕ ಪರಿಷ್ಕರಣೆಯ ಕಾರ್ಯಕ್ರಮ ರಮಝಾನಿನ ಉಪವಾಸವಾಗಿದೆ. ಆದರೆ ಎಲ್ಲಿಯೂ ಅಲ್ಲಾಹನು ಜುಮುಅತುಲ್ ವಿದಾವನ್ನು ಸೂಚಿಸಿಲ್ಲ. ಅಲ್ಲಾಹನು ರಮಝಾನ್ ತಿಂಗಳಲ್ಲಿ ಸಂಪೂರ್ಣವಾಗಿ ಉಪವಾಸ ಅನುಷ್ಠಿಸಲು ಆದೇಶಿಸಿದ್ದಾನೆ. ಜುಮುಅದ ಅನುಗ್ರಹಗಳಿಂದ ಅನುಗ್ರಹ ಪಡೆಯಲು ಪ್ರತಿಯೊಂದು ಜುಮುಅದಿಂದ ಅನುಗ್ರಹ ಪಡೆಯಲು ಪ್ರತಿ ಏಳು ದಿನಗಳಿಗೊಮ್ಮೆ ಬರುವ ಜುಮುಅ ಕ್ಷಮೆಗಳಿಸುವ ಮಾರ್ಗ ಎಂದು ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ. ಪ್ರತಿ ಏಳು ದಿನಗಳಿಗೊಮ್ಮೆ ಬರುವ ಜುಮುಅ ದಿನ ನಮ್ಮ ಬಗ್ಗೆ ಸಾಕ್ಷ್ಯ ನೀಡಬೇಕು. ನಾವು ಈ ದಿನಗಳನ್ನು ಅಲ್ಲಾಹನ ಭಯದಿಂದ ಕಳೆದೆವು. ಅಲ್ಲಾಹನ ಕೋಪಕ್ಕೆ ಪಾತ್ರವಾಗುವಂತಹ ಕೃತ್ಯವೇನೂ ನಾವು ಮಾಡಿಲ್ಲ. ಅಲ್ಲಾಹನಿಗೆ ಕೋಪ ಬರಿಸುವ ಕೆಲಸವನ್ನು ಪ್ರಜ್ಞಾಪೂರ್ವಕವಾಗಿ ಮಾಡಿಲ್ಲ ಎಂದು ಸಾಕ್ಷ್ಯ ವಹಿಸುವಂತಾಗಬೇಕು. ನಾವು ಹೀಗೆ ವರ್ತಿಸಿದರೆ ಅಲ್ಲಾಹನು ನಮ್ಮ ಕುಂದು ಕೊರತೆಗಳನ್ನು ಕ್ಷಮಿಸುವನು. ಪ್ರತಿ ಜುಮುಅ ಅಲ್ಲಾಹನ ಸನ್ನಿಧಿಯಲ್ಲಿ ಸಾಕ್ಷ್ಯ ನೀಡುವುದು– ಈ ದಾಸ ಹೆದರುತ್ತಾ ಈ ದಿನದಲ್ಲಿ ಜೀವಿಸಲು ಪ್ರಯತ್ನಿಸಿದನು ಎಂದು. ಇದೇ ರೀತಿ ಅಲ್ಲಾಹನ ಸಂಪ್ರೀತಿ ಗಳಿಸಲು ನಮಾಝ್‌ಗಳನ್ನು ಅನುಷ್ಠಿಸಿದರೆ ಅವು ನಮ್ಮ ಪರವಾಗಿ ಸಾಕ್ಷ್ಯ ನೀಡುವುವು. ರಮಝಾನಿನ ಉಪವಾಸಗಳ ಸ್ಥಿತಿ ಸಹ ಹೀಗೆಯೇ ಆಗಿವೆ. ಇವುಗಳು ನಮಗೆ ಪಾಪ ಪರಿಹಾರಗಳಾಗುವುವು ಎನ್ನುವುದರ ಅರ್ಥವೇನೆಂದರೆ, ಈ ಆರಾಧನೆಗಳು ನಮ್ಮ ಪರವಾಗಿ ಸಾಕ್ಷ್ಯ ನೀಡುವುವು ಹಾಗೂ ಅವು ನಮಗೆ ಕ್ಷಮೆ ದೊರೆಯುವಂತೆ ಮಾಡುವ ಸಾಮಗ್ರಿಗಳಾಗುವುವು.

ಜುಮುಅದ ಬಗ್ಗೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೀಗೆ ಸಹ ಹೇಳಿದ್ದಾರೆ– ಜುಮುಅದ ದಿನ ನನಗೆ ಹೆಚ್ಚು ಹೆಚ್ಚಾಗಿ ದುರೂದ್ ಅರ್ಪಿಸಿರಿ. ಏಕೆಂದರೆ ಜುಮುಅ ದಿನ ನಿಮ್ಮ ದುರೂದ್ ನನ್ನ ಮುಂದೆ ಇರಿಸಲ್ಪಡುತ್ತದೆ.

ಇವು ಜುಮುಅದ ದಿನಗಳಲ್ಲಿ ಜಾರಿಯಾಗುವ ಅನುಗ್ರಹಗಳಾಗಿವೆ. ಜುಮುಅತುಲ್ ವಿದಾದ ದಿನದ ದುರೂದ್ ನನ್ನ ಮುಂದೆ ಇರಿಸಲ್ಪಡುವುದೆಂದು ಎಲ್ಲಿಯೂ ಹೇಳಿಲ್ಲ. ಆದುದರಿಂದ ಈ ರೀತಿ ದುರೂದ್ ಅರ್ಪಿಸುವವರಲ್ಲಿ ಸೇರಿಕೊಂಡು ಅನುಗ್ರಹ ಗಳಿಸುವವರು ಭಾಗ್ಯಶಾಲಿಗಳಾಗಿದ್ದಾರೆ. ಈ ದಿನ ಅಥವಾ ನಾಳೆ ನಾವು ರಮಝಾನಿನ ವಿಶಿಷ್ಟ ಆರಾಧನೆಯಾದ ಉಪವಾಸ ಅನುಷ್ಠಾನದಿಂದ ಹೊರಗೆ ಬರುತ್ತಿದ್ದೇವೆ. ಆದರೆ ಜುಮುಅದ ಆರಾಧನೆಗಳಿಂದ ಒಂದು ವರ್ಷಕಾಲ ಹೊರಗೆ ಬರುವುದಿಲ್ಲ. ಮುಂದಿನ ವಾರದ ಜುಮುಅ ನಮಗೆ ಈ ದಿನದ ಜುಮುಅದ ಹಾಗೆಯೇ ಮಹತ್ವ ಪೂರ್ಣವಾಗಿದೆ. ನಮ್ಮಲ್ಲಿ ಇದ್ದ ಬಲಹೀನತೆಗಳನ್ನೂ ಕುಂದು ಕೊರತೆಗಳನ್ನೂ ಇನ್ನು ಮುಂದೆ ದೂರಸರಿಸಲು ನಾವು ಪ್ರತಿಜ್ಞೆ ಮಾಡುತ್ತೇವೆ.

ಹೀಗೆ ಮಾಡಿದರೆ ನಾವು ಜುಮುಅಕ್ಕೆ ವಿದಾಯ ಹೇಳುವವರಾಗುವುದಿಲ್ಲ. ರಮಝಾನಿನಲ್ಲಿ ಅನುಷ್ಠಾನಕ್ಕೆ

ತಂದ ಒಳಿತುಗಳಿಗೆ ಸಹ ವಿದಾಯ ಹೇಳುವವರಾಗುವುದಿಲ್ಲ. ಬದಲಾಗಿ, ನಾವು ನಮ್ಮ ಕೆಡುಕುಗಳಿಗೂ ಬಲಹೀನತೆಗಳಿಗೂ ಉದಾಸೀನತೆಗಳಿಗೂ ವಿದಾಯ ಹೇಳಿ ಅವುಗಳಿಂದ ಯಾವಾಗಲೂ ನಮ್ಮನ್ನು ರಕ್ಷಿಸಿಕೊಳ್ಳಲು ಅಲ್ಲಾಹನ ಅಭಯವನ್ನು ಪಡೆಯಲು ಪ್ರಯತ್ನಿಸುವವರಾಗುವೆವು. ನಾವು ರಮಝಾನಿನ ಅನುಗ್ರಹಗಳಿಂದ ಲಾಭ ಪಡೆಯುವೆವು. ನಮಗೆ ರಮಝಾನ್ ತಿಂಗಳಲ್ಲಿ ಲಭಿಸಿದ ಒಳಿತುಗಳು ವರ್ಧಿಸುವಂತೆ ಪ್ರಯತ್ನ ಮಾಡುವುದು ಸಾಧ್ಯವಾಗದಿದ್ದರೆ ಕನಿಷ್ಠಪಕ್ಷ ಅವುಗಳನ್ನು ಕಾಪಾಡಿಕೊಂಡು ಮುಂದಿನ ವರ್ಷದ ರಮಝಾನನ್ನು ಸ್ವಾಗತಿಸಲು ನಮಗೆ ಸಾಧ್ಯವಾಗಬೇಕು.

ನಾವು ಜುಮುಅತುಲ್ ವಿದಾ ಆಚರಿಸಿದೆವು ಎಂದು ಯೋಚಿಸುವವರು ನಾವಾಗಬಾರದು. ನಾವು ರಮಝಾನಿಗೆ ವಿದಾಯ ಹೇಳಿದೆವು ಎಂದು ಸಹ ಯೋಚಿಸುವವರಾಗಬಾರದು. ನಾವು ನಮ್ಮ ಆರಾಧನೆಗಳಿಗೆ ವಿದಾಯ ಹೇಳಿದೆವೆಂದೂ ಯೋಚಿಸುವವರಾಗಬಾರದು. ರಮಝಾನಿನಲ್ಲಿ ಅನುಷ್ಠಿಸಿದ ಆರಾಧನೆಗಳಿಗೆ ವಿದಾಯ ಹೇಳುವವರಾಗಬಾರದು.

ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ ಪ್ರಕಾರ ಜುಮುಅದ ದಿನದಲ್ಲಿ ಪ್ರಾರ್ಥನೆಗಳು ಅಂಗೀಕರಿಸಲ್ಪಡುವ ಒಂದು ಸಮಯವಿರುತ್ತದೆ. ಹಿಂದೆ ಸಹ ನಾನು ಇದರ ಬಗ್ಗೆ ಪ್ರಸ್ತಾಪಿಸಿದ್ದೇನೆ. ನಾವು ವಿಶಿಷ್ಟವಾಗಿ ಹೀಗೆ ಪ್ರಾರ್ಥಿಸಬೇಕು. ರಮಝಾನ್ ತಿಂಗಳು ನಮ್ಮನ್ನು ಅಗಲಿ ಹೋಗುವಾಗ ಎಲ್ಲ ಕೆಡುಕುಗಳಿಂದ ಪರಿಪೂರ್ಣವಾಗಿ ನಮಗೆ ವಿಮೋಚನೆ ನೀಡುತ್ತಾ ಒಳಿತುಗಳನ್ನು ನಿಷ್ಠಾಪೂರ್ಣವಾಗಿ ಅನುಷ್ಠಿಸುವ ಭಾಗ್ಯ ನೀಡುತ್ತಾ ನಮ್ಮಿಂದ ಅಗಲಿ ಹೋಗುವಂತಾಗಲಿ. ನಾವು ಸತ್ಯವಾಗಿ ತಖ್ವವನ್ನು (ಭಯಭಕ್ತಿಯನ್ನು) ಅವಲಂಬಿಸುವವರಾಗೋಣ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಆಗಮನದ ಉದ್ದೇಶವನ್ನು ನಾವು ಈಡೇರಿಸುವವರಾಗೋಣ. ಇಸ್ಲಾಮಿನ ಉಪದೇಶಗಳನ್ನು ನಮ್ಮ ಜೀವಿತದ ಭಾಗಗಳನ್ನಾಗಿ ಮಾಡಿ ಈ ಸುಂದರ ಉಪದೇಶಗಳನ್ನು ಲೋಕಕ್ಕೆ ತೋರಿಸಿಕೊಟ್ಟು "ಇಸ್ಲಾಮ್ ಧರ್ಮ ಮನುಷ್ಯನನ್ನು ದೇವನೊಂದಿಗೆ ಸಂಪರ್ಕ ಸಾಧಿಸುವಂತೆ ಮಾಡುತ್ತದೆ. ಇದೇ ಧರ್ಮ ಮನುಷ್ಯರಿಗೆ ಅನ್ಯೋನ್ಯ ಹಕ್ಕುಗಳನ್ನು ಈಡೇರಿಸಿಕೊಡಲು ಅತ್ಯುತ್ತಮ ರೀತಿಯಲ್ಲಿ ಮಾರ್ಗದರ್ಶನ ನೀಡುತ್ತದೆ" ಎಂದು ಜನರಿಗೆ ತಿಳಿಸುವವರಾಗೋಣ. ಅಲ್ಲಾಹನು ಹೀಗೆ ಮಾಡಲು ನಮಗೆ ಭಾಗ್ಯ ದಯಪಾಲಿಸಲಿ.

ಕಷ್ಟಕ್ಕೊಳಗಾಗಿರುವ ಎಲ್ಲ ಅಹ್ಮದಿಯರು ಕಷ್ಟಗಳಿಂದ ಹೊರಗೆ ಬರುವಂತಾಗಲಿ ಎಂದು ಪ್ರಾರ್ಥಿಸಿರಿ. ಯಾವುದಾದರೂ ರೀತಿಯಲ್ಲಿ ವ್ಯಾಕುಲಚಿತ್ತರಾಗಿರುವವರ ಚಿಂತೆಗಳನ್ನೂ ವ್ಯಾಕುಲಗಳನ್ನೂ ಅಲ್ಲಾಹನು ನಿವಾರಿಸುವವನಾಗಲಿ. ಅದೇ ರೀತಿ ಮುಸ್ಲಿಮ್ ಸಮುದಾಯವು ಈ ಕಾಲಘಟ್ಟದ ಇಮಾಮರನ್ನು ನಂಬಿ ಎಲ್ಲ ವಿಧಗಳ ಕಷ್ಟಗಳಿಂದಲೂ ದುಃಖಗಳಿಂದಲೂ ವಿಮೋಚನೆ ಪಡೆಯುವಂತಾಗಲಿ ಎಂದು ಸಹ ಪ್ರಾರ್ಥಿಸಿರಿ. ಒಬ್ಬರಿನ್ನೊಬ್ಬರ ವಿರುದ್ಧ ದೌರ್ಜನ್ಯ ಮಾಡುತ್ತಿರುವವರ ಕೈಗಳನ್ನು ಅಲ್ಲಾಹನು ತಡೆಯಲಿ. ಇಸ್ಲಾಮ್ ಧರ್ಮ, ತನ್ನ ನೈಜ ವೈಭವದೊಂದಿಗೆ ಪ್ರತಿಯೊಂದು ಮುಸ್ಲಿಮ್ ರಾಷ್ಟ್ರಗಳಲ್ಲಿ ಲೋಕಕ್ಕೆ ಕಾಣಿಸುವಂತಾಗಲಿ – ಆಮೀನ್.

--------------*****--------------

***Friday Sermon delivered by Hadrath Khaleefatul Masih Al Khamis*** *(atba)*

*at Masjid Baithul Futhuh, London on 17-07-2015.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email:*** *khutuba.kannada@gmail.com*

**You can find all the Sermons archived at**: www.alislam.org/friday-sermon